ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

E-Mail: prydirector.edu.sgkar@nic.in

ಸಂಖ್ಯೆ : ಸಿ7(8)/ಆರ್.ಟಿ.ಇ/ಶುಲ್ಕ ಮರುಪಾವತಿ ಹಾ. ದಾಖಲೆ/2017-18 ದಿನಾಂಕ: 16-02-2019

**ಸುತ್ತೋಲೆ**

**ವಿಷಯ: 2019-20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಸಾಟ್ಸ್‌ನಲ್ಲಿ ಹಾಜರಾತಿ ಅಪ್ ಡೇಟ್ ಮಾಡುವ ಬಗ್ಗೆ.**

**ಉಲ್ಲೇಖ: ಇ.ಆಡಳಿತ ಶಾಖೆಯ ಸ.ನಿ ರವರ ಇ.ಮೇಲ್ ದಿ: 12.2.2019**

-----

2019-20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಈಗಾಗಲೇ ತಂತ್ರಾಂಶದಲ್ಲಿ ಮಾಹಿತಿಯನ್ನು ಅಪ್‌ಡೇಟ್ ಮಾಡಲು ಅವಕಾಶವನ್ನು ದಿ: 25.1.2019ರವರೆಗೆ ನೀಡಲಾಗಿತ್ತು. ಅದರಲ್ಲಿ ಈಗಾಗಲೇ ಹಲವು ಶಾಲೆಯವರ ಶುಲ್ಕ ಮರುಪಾವತಿಯ ಬೇಡಿಕೆಗಳು ಮಾನ್ಯ ಆಯುಕ್ತರ ಹಂತದಿಂದ ಮಂಜೂರಾತಿ ಆಗಿರುತ್ತದೆ. ಮೊದಲನೇ ಕಂತಿನ ಶುಲ್ಕ ಮರುಪಾವತಿ ಮಂಜೂರಾತಿ ಆಗಿರುವಂತಹ ಶಾಲೆಗಳ 2ನೇ ಕಂತಿನ ಶುಲ್ಕ ಮರುಪಾವತಿಗಾಗಿ ಮಕ್ಕಳ ಹಾಜರಾತಿಯನ್ನು ಪ್ರತಿಯೊಂದು ಶಾಲೆಯವರು ಸಾಟ್ಸ್ ತಂತ್ರಾಂಶದಲ್ಲಿ ( ಎಸ್.ಎ.ಟಿ.ಎಸ್) ಕಡ್ಡಾಯವಾಗಿ ನಮೂದಿಸಬೇಕು. ಇಲ್ಲವಾದಲ್ಲಿ ಅಂತಹ ಶಾಲೆಗಳು 2ನೇ ಕಂತಿನ ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೊದಲನೇ ಕಂತಿನ ಶುಲ್ಕ ಮರುಪಾವತಿ ಪಡೆದ ಅಥವಾ ಉ.ನಿ(ಆ)ರವರಿಂದ ಸ್ಯಾಂಕ್ಷನ್ ಆರ್ಡರ್ ಜನರೇಟ್ ಆಗಿರುವ ಶಾಲೆಗಳಿಗೆ ಜುಲೈ 2018 ರಿಂದ ನವೆಂಬರ್ 2018 ರವರೆಗಿನ ಮಕ್ಕಳ ಹಾಜರಾತಿಯನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ನಮೂದಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲು ತಿಳಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ

ಪ್ರತಿಯನ್ನು

1. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ) ವಿಭಾಗ, ಇವರಿಗೆ ಮಾಹಿತಿಗಾಗಿ
2. ಹಿರಿಯ ಸಹಾಯಕ ನಿರ್ದೇಶಕರು ಸಾಟ್ಸ್ ವಿಭಾಗ ಎಸ್.ಎಸ್.ಎ. ಇವರಿಗೆ ಮಾಹಿತಿಗಾಗಿ